ಮಾಗಡಿ ತಾಲೂಕಿನಲ್ಲಿ ಸಣ್ಣ ನೀರಾವರಿ ಯೋಜನೆಯಡಿಯಲ್ಲಿರುವ ಕೆರೆಗಳು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 5 : (23)

ಸದಸ್ಯರ ಹೆಸರು : ಶ್ರೀ ಬಾಲಕೃಷ್ಣ ಹೆಚ್.ಸಿ.

ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರಗಳು
ಅ	ಮಾಗಡಿ ತಾಲೂಕಿನಲ್ಲಿ ಸಣ್ಣ ನೀರಾವರಿ ಯೋಜನೆಯಡಿಯಲ್ಲಿರುವ ಕೆರೆಗಳ ಸಂಖ್ಯೆ ಎಷ್ಟು (ವಿವರ ನೀಡುವುದು);	29 ಕೆರೆಗಳಿವೆ.
ಆ	ಇವುಗಳಲ್ಲಿ ಯಾವ ಯಾವ ಕೆರೆಗಳನ್ನು ಈಗಾಗಲೇ ಪುನಶ್ಚೇತನಗೊಳಿಸಲಾಗಿದೆ (ವಿವರ ನೀಡುವುದು);	ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
ಇ	ಹಾಗಿದ್ದಲ್ಲಿ ಪುನಶ್ಚೇತನಗೊಳಿಸದ ಉಳಿಕೆ ಕೆರೆಗಳನ್ನು ಯಾವಾಗ ಪುನಶ್ಚೇತನಗೊಳಿಸಲಾಗುವುದು, ಇದರ ಬಗ್ಗೆ ಇಲ್ಲಿಯವರೆಗೆ ತೆಗೆದುಕೊಂಡಿರುವ ಕ್ರಮಗಳಾವುವು?	ಪುನಶ್ಚೇತನಗೊಳಿಸದಿರುವ ಕೆಂಪಸಾಗರ ಕೆರೆ, ಭಗಿನಿ ಕೆರೆ ಮತ್ತು ಮಾಗಡಿ ಗೌರಮ್ಮನಕೆರೆ ಕೆರೆಗಳನ್ನು 2008-09ನೇ ಸಾಲಿನ ಆಯವ್ಯಯದಲ್ಲಿ ಲಭ್ಯವಾಗುವ ಅನುದಾನಕ್ಕನುಸಾರವಾಗಿ ಕೈಗೆತ್ತಿಕೊಳ್ಳಲು ಪರಿಶೀಲಿಸಲಾಗುವುದು.

ಅನುಬಂಧ

ಮಾಗಡಿ ತಾಲೂಕಿನ ಸಣ್ಣ ನೀರಾವರಿ ಕೆರೆಗಳ ವಿವರ

ಕ್ರ.ಸಂ.	ಕೆರೆಗಳ ಹೆಸರು	ಅಚ್ಚುಕಟ್ಟು ವಿಸ್ತೀರ್ಣ ಹೆಕ್ಟೇರುಗಳಲ್ಲಿ
1.	ದೊಡ್ಡಮುದಿಗೆರೆ ಊರ ಮುಂದಿನ ಕೆರೆ	44.23
2.	ಮಾಯಸಂದ್ರ ಕೆರೆ	156.62
3.	ಹೆಬ್ಬಳಲು ಕೆರೆ	67.65
4.	ಬಿಸ್ಕೂರು ದೊಡ್ಡಕೆರೆ	130.31
5.	ಸೋಲೂರು ದೊಡ್ಡಕೆರೆ	44.92
6.	ಗುಡೇಮಾರನಹಳ್ಳಿ ದೊಡ್ಡಕೆರೆ	63.94
7.	ಬ್ಯಾಲದ ಕೆರೆ	41.74
8.	ಬಿಳುಗುಂಬ ಕೆರೆ	70.82
9.	ಮುತ್ತುರಾಯನಗುಡಿಪಾಳ್ಯ	89.03
10.	ಕಲ್ಲದೊಡ್ಡ ಕೆರೆ	63.00
11.	ಸೋಮನಕಟ್ಟೆ ಕೆರೆ	43.32
12.	ತಿಪ್ಪಸಂದ್ರ ಕೆರೆ	109.40
13.	ಸಂಕೀಘಟ್ಟ ಕೆರೆ	167.14
14.	ಬಸವನಕಟ್ಟೆ ಕೆರೆ	86.75
15.	ತಾವರೆಕೆರೆ ದೊಡ್ಡಕೆರೆ	89.26
16.	ಚಿಕ್ಕಳ್ಳಿ ಕೆರೆ	100.39
17.	ಖಾಜೀಪಾಳ್ಯ ಕೆರೆ	43.71
18.	ಕೆಂಚನಪುರ ಕೆರೆ	114.53
19.	ಕೋಡಿಹಳ್ಳಿ ಕೆರೆ	51.93
20.	ನಾರಸಂದ್ರ ದೊಡ್ಡಕೆರೆ	61.51
21.	ಮುತ್ತುಸಾಗರ ಕೆರೆ	43.30

22.	ಹುಲಿಕಲ್ ಹಿರೇಕೆರೆ	207.00
23.	ಕನ್ನೂರು ಕೆರೆ	41.28
24.	ಶ್ರೀಗಿರಿಪುರ ದೊಡ್ಡಕೆರೆ	54.63
25.	ತಮ್ಮೇನಹಳ್ಳಿ ಕೆರೆ	152.16
26.	ಬನವಾಡಿ ದೊಡ್ಡಕೆರೆ	72.54
27.	ಕೆಂಪಸಾಗರ ಕೆರೆ	157.97
28.	ಭಗಿನಿ ಕೆರೆ	70.52
29.	ಮಾಗಡಿ ಗೌರಮ್ಮನಕೆರೆ	40.47
	ಒಟ್ಟು	**2480.07**

* ಮೇಲ್ಕಂಡ ಕೆರೆಗಳಲ್ಲಿ ಕ್ರ.ಸಂ.1 ರಿಂದ 26 ರವರೆಗಿನ ಕೆರೆಗಳನ್ನು ಕೇಂದ್ರ ಸರ್ಕಾರದ ನೆರವಿನಿಂದ ಕೆರೆಗಳ ದುರಸ್ತಿ, ಜೀರ್ಣೋದ್ಧಾರ ಹಾಗೂ ಪುನರುಜ್ಜೀವನ ಯೋಜನೆಯಡಿ ಪುನಶ್ಚೇತನಗೊಳಿಸಲಾಗಿದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಈ ಕೆರೆಗಳ ಪುನಶ್ಚೇತನ ಎಂದರೆ ಏನು ಎಂಬ ಬಗ್ಗೆ ಮಾನ್ಯ ಮಂತ್ರಿಗಳು ನನಗೆ ಹೇಳಬೇಕು. ಈಗ ಹೂಳು ಎತ್ತುವುದು, ಕೋಡಿ ರಿಪೇರಿ ಮಾಡುವುದು, ತೂಬು ಎತ್ತುವುದು ಮಾತ್ರ ಪುನಶ್ಚೇತನವೇ? ಅಥವಾ ಮುಂದೆ ಇರತಕ್ಕಂಥ ಚಾನಲ್‌ಗಳನ್ನೂ ಕೂಡ ರಿಪೇರಿ ಮಾಡುವುದು ಪುನಃಶ್ಚೇತನವೇ ಎಂಬ ಬಗ್ಗೆ ಹೇಳಬೇಕು. ಇದರ ಜೊತೆಗೆ ಈಗಾಗಲೇ ಹಿಂದೆ ಇದ್ದಂಥ ಅನುದಾನದಲ್ಲಿ ಕೇವಲ ತೂಬು ಮತ್ತು ಕೋಡಿ ರಿಪೇರಿ ಮಾಡಿ ಸ್ವಲ್ಪ ಹೂಳನ್ನು ಎತ್ತಿದ್ದಾರೆ. ಆದರೆ ಮುಂದೆ ಇರುವ ಚಾನಲ್‌ಗಳ ರಿಪೇರಿಯಾಗಿಲ್ಲ. ಇನ್ನು ಲಭ್ಯವಿರುವ ಅನುದಾನದಲ್ಲಿ 2008-09 ನೇ ಸಾಲಿನ ಆಯವ್ಯಯದಲ್ಲಿ ಲಭ್ಯವಾಗುವ ಅನುದಾನಕ್ಕನುಸಾರವಾಗಿ ಕೈಗೆತ್ತಿಕೊಳ್ಳಲು ಪರಿಶೀಲಿಸಲಾಗುವುದು ಎಂದು ಬಾಕಿ ಇರತಕ್ಕಂಥ ಕೆರೆಗಳ ಬಗ್ಗೆ ಹೇಳಿದ್ದೀರಿ. ಈಗ ನಮ್ಮ ತಾಲ್ಲೂಕು ನಂಜುಂಡಪ್ಪ ವರದಿ ಪ್ರಕಾರ ಹಿಂದುಳಿದ ತಾಲ್ಲೂಕು ಆಗಿದೆ ಮತ್ತು ಬಯಲು ಸೀಮೆ ಕೂಡ ಆಗಿದೆ. ಆದುದರಿಂದ ದಯಮಾಡಿ ವಿಶೇಷವಾಗಿ ಅನುದಾನವನ್ನು ನಮ್ಮ ತಾಲ್ಲೂಕಿನಲ್ಲಿ ಈ ಬಗ್ಗೆ ಕೊಡುತ್ತೀರ? ಈಗಾಗಲೇ ಹಿಂದೆ ಆಗಿರತಕ್ಕಂಥದ್ದಕ್ಕೆ ಮುಂದೆಯೂ ಕೆಲಸವನ್ನು ಮುಂದುವರೆಸಿಕೊಂಡು ಹೋಗಲು ಅವಕಾಶವನ್ನು ಕೊಡುತ್ತೀರಾ ಎಂಬ ಬಗ್ಗೆ ಹೇಳಬೇಕು.

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ ಯೋಜನೆ ಮತ್ತು ಸಾಂಖ್ಯಿಕ ಸಚಿವರು): ಮಾನ್ಯ ಅಧ್ಯಕ್ಷರೆ, ಮಾಗಡಿ ತಾಲ್ಲೂಕಿನಲ್ಲಿ 2005-06 ರಲ್ಲಿ ಕೇಂದ್ರ ಸರ್ಕಾರದ ನೆರವಿನಡಿಯಲ್ಲಿ 26 ಕೆರೆಗಳ ದುರಸ್ತಿ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ. ಈಗಾಗಲೇ 24 ಕೆರೆಗಳ ದುರಸ್ತಿಯನ್ನು ಮಾಡಿಯಾಗಿದೆ. ಅದಕ್ಕೆ ಬೇಕಾಗತಕ್ಕಂಥ ಒಟ್ಟು ವೆಚ್ಚ 446 ಲಕ್ಷ ರೂಪಾಯಿಗಳೆಂದು ಅಂದಾಜು ಮಾಡಲಾಗಿತ್ತು. ಈಗಾಗಲೇ 372 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈಗ 24 ಕೆರೆಗಳು ಪೂರ್ಣ ದುರಸ್ತಿಯಾಗಿದೆ. ಇನ್ನೆರಡು ಕೆರೆಗಳ ದುರಸ್ತಿಯಾಗಬೇಕಾಗಿದೆ. ಈ ಕೆರೆಗಳಲ್ಲಿಯೂ ಕೂಡ ಸುಮಾರು ಶೇಕಡ 80 ರಿಂದ 90 ರಷ್ಟು ದುರಸ್ತಿ ಕೆಲಸವಾಗಿದೆ. ಇನ್ನು ಬಾಕಿ ಇರತಕ್ಕಂಥ ಶೇಕಡ 10 ರಿಂದ 20 ರಷ್ಟು ಕೆಲಸವನ್ನು ಆದಷ್ಟು ಬೇಗ ಮುಗಿಸಿಕೊಡತಕ್ಕಂಥ ಕೆಲಸವನ್ನು ಮಾಡುತ್ತೇವೆ. ಮಾಗಡಿ ತಾಲ್ಲೂಕಿನಲ್ಲಿ ಒಟ್ಟು 29 ಕೆರೆಗಳಿವೆ. ಮಾನ್ಯ ಶಾಸಕರ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 29 ಕೆರೆಗಳಿವೆ. ಈ 29 ಕೆರೆಗಳಲ್ಲಿ ಈಗಾಗಲೇ 26 ಕೆರೆಗಳ ದುರಸ್ತಿಯನ್ನು ಈಗಾಗಲೇ ಮಾಡಿಯಾಗಿದೆ. ಇನ್ನುಳಿದಂಥ ಮೂರು ಕೆರೆಗಳನ್ನು ದುರಸ್ತಿಯನ್ನು ಈ ವರ್ಷದ ಹಣಕಾಸಿನ ನೆರವಿನಿಂದ ಮಾಡಿಕೊಡುವುದಕ್ಕೆ ನಾವು ಅಂದರೆ ಸರ್ಕಾರ ಬದ್ಧವಿದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೇ, ಸಂಪೂರ್ಣ ದುರಸ್ತಿ ಎಂದರೆ ಏನು ಎಂದು ಮಾನ್ಯ ಸಚಿವರು ಹೇಳಬೇಕಾಗುತ್ತದೆ. ಕೇವಲ ತೂಬು ರಿಪೇರಿ, ಕೋಡಿ ರಿಪೇರಿಯಾದರೆ ಆಗುವುದಿಲ್ಲ. ಮುಂದೆ ಇರತಕ್ಕಂಥ ಚಾನಲ್‌ಗಳನ್ನೂ ಕೂಡ ದುರಸ್ತಿ ಮಾಡಬೇಕಾಗುತ್ತದೆ. ಇನ್ನು ಬಾಕಿ ಕೆರೆಗಳ ದುರಸ್ತಿ ಕೆಲಸವನ್ನು ಲಭ್ಯವಿರುವ ಅನುದಾನದಲ್ಲಿ ಮಾಡುತ್ತೇವೆ ಎಂದು ಹೇಳಿದಿರಿ. ಆದರೆ ಲಭ್ಯವಿರುವ ಹಣದಲ್ಲಿ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ವಿಶೇಷವಾದ ಅನುದಾನವನ್ನೇನಾದರೂ ಕೊಡುತ್ತೀರಾ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಹಣದ ಕೊರತೆ ಇಲ್ಲ. ಅವರು ದುರಸ್ತಿ ಬಗ್ಗೆ ವಿವರಣೆಯನ್ನು ಕೇಳುತ್ತಿದ್ದಾರೆ. ಪೂರ್ಣ ದುರಸ್ತಿ ಎಂದರೆ ಏನು ಎಂದು ಕೇಳುತ್ತಿದ್ದಾರೆ. ಮಾನ್ಯ ಅಧ್ಯಕ್ಷರೆ, 26 ಕೆರೆಗಳ ಒಟ್ಟು ಅಚ್ಚುಕಟ್ಟು ಅಂದರೆ ಒರಿಜಿನಲ್ ಅಚ್ಚುಕಟ್ಟು ಎಸ್ಟಿಮೇಟ್ ಪ್ರಕಾರ 2211 ಹೆಕ್ಟೇರ್. ಅವುಗಳ ಪೈಕಿ ದುರಸ್ತಿ ಆಗುವುದಕ್ಕಿಂತ ಮುಂಚೆ 1750 ಹೆಕ್ಟೇರ್ ಇರಿಗೇಶನ್ ಆಗುತ್ತಿತ್ತು. ಇವತ್ತು ನಾವು ದುರಸ್ತಿ ಮಾಡಿದ ಮೇಲೆ 461 ಹೆಕ್ಟೇರ್ ಪ್ರದೇಶ ಇನ್ನೂ ಹೆಚ್ಚಿಗೆ ಇರಿಗೇಶನ್ ಆಗುತ್ತಿದೆ. ಆ ಅಚ್ಚುಕಟ್ಟಿನಲ್ಲಿ ಬರತಕ್ಕಂಥ ಎಲ್ಲಾ ಚಾನಲ್‌ಗಳ ದುರಸ್ತಿಯಾಗಿರಬಹುದು, ರೀ- ಮಾಡಲಿಂಗ್ ಆಗಿರಬಹುದು, ತೂಬುಗಳ ರಿಪೇರಿ ಆಗಿರಬಹುದು, ಹೂಳೆತ್ತತಕ್ಕಂಥ ಕೆಲಸ ಆಗಿರಬಹುದು, ಹೀಗೆ ಇನ್ನೂ ಏನಾದರೂ ದುರಸ್ತಿ ಅಗತ್ಯ ಬಿದ್ದರೆ ಖಂಡಿತವಾಗಿ ಸರ್ಕಾರ ಮಾಡಿಕೊಡುತ್ತದೆ. ಸರ್ಕಾರದ ಹಣದಿಂದ ಸಂಪೂರ್ಣ ಅಚ್ಚುಕಟ್ಟನ್ನು ಬಳಸಿಕೊಳ್ಳಬೇಕು ಎನ್ನತಕ್ಕಂಥದ್ದು ಉದ್ದೇಶವಾಗಿದೆ.

ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಉಚಿತ ನಿವೇಶನ ವಿತರಣೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 6 : (24)

ಸದಸ್ಯರ ಹೆಸರು : ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ)

ಉತ್ತರಿಸುವ ಸಚಿವರು : ಶ್ರೀ ಕೆ. ಕರುಣಾಕರ ರೆಡ್ಡಿ, ಕಂದಾಯ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರಗಳು
ಅ	ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಸರ್ಕಾರ ಎಷ್ಟು ಉಚಿತ ನಿವೇಶನಗಳನ್ನು ವಿತರಣೆ ಮಾಡಿದೆ. (ತಾಲೂಕುವಾರು ಹಾಗೂ ಜಿಲ್ಲಾವಾರು ಮಾಹಿತಿ ನೀಡುವುದು)	ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ (2005-2006 ರಿಂದ 2007-2008 ರವರೆಗೆ) ಗ್ರಾಮೀಣ ವಸತಿ ನಿವೇಶನ ಮತ್ತು ನಗರ ವಸತಿ ನಿವೇಶನ ಯೋಜನೆಗಳಡಿ 19077 ನಿವೇಶನಗಳನ್ನು ವಿತರಿಸಲಾಗಿದೆ. ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರಗಳನ್ನು ಅನುಬಂಧ 1 ರಲ್ಲಿ ನೀಡಲಾಗಿದೆ.
ಆ	94ಸಿ ಅನ್ವಯ ಒಟ್ಟು ಎಷ್ಟು ಅರ್ಜಿಗಳು ಬಂದಿರುತ್ತದೆ. (ತಾಲ್ಲೂಕುವಾರು ವಿವರ ನೀಡುವುದು)	282192 ತಾಲ್ಲೂಕುವಾರು ವಿವರಗಳನ್ನು ಅನುಬಂಧ 2 ರಲ್ಲಿ ನೀಡಲಾಗಿದೆ.
ಇ	ಈ ಪೈಕಿ ಎಷ್ಟು ಅರ್ಜಿಗಳನ್ನು ಮಂಜೂರು ಮಾಡಲಾಗಿದೆ ಹಾಗೂ ಅದನ್ನು ಯಾವಾಗ ಮಂಜೂರು ಮಾಡಲಾಗಿದೆ	ನಿಯಮಗಳಿಗನುಸಾರ ನಿಗದಿತ ಶುಲ್ಕವನ್ನು ಪಾವತಿ ಮಾಡಿದ ನಂತರ 84,150 ಅರ್ಜಿಗಳನ್ನು ಮಂಜೂರು ಮಾಡಲಾಗಿರುತ್ತದೆ.